ಸಿ.ಸಿ. ನಂಬರ 17/2017

ಸಿಡಬ್ಲ್ಯೂ- 1/ ಪಿಡಬ್ಲ್ಯೂ-1

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 02-05-2025.

**(ಸಾಕ್ಷಿಯು ಟಿಬೇಟಿಯನ್ ಭಾಷೆ ಮಾತ್ರ ಬಲ್ಲವರಾಗಿದ್ದು, ಆ ಕಾರಣ Nyima Samdup ರವರನ್ನು ಅನುವಾದಕರನ್ನಾಗಿ ನೇಮಿಸಿಕೊಳ್ಳಲಾಯಿತು. ಸಾಕ್ಷಿಗೆ 2 ನೇ ಆರೋಪಿ ಪರ ವಕೀಲರು ಹಿಂದಿ ಭಾಷೆಯಲ್ಲಿ ಕೇಳಿದ ಪ್ರಶ್ನೆಗಳನ್ನು, ಟಿಬೇಟಿಯನ್ ಭಾಷೆಯಲ್ಲಿ ಅನುವಾದಕರು ಅನುವಾದಿಸಿ ಸಾಕ್ಷಿಗೆ ಹೇಳಿದ್ದು, ಸಾಕ್ಷಿಯು ಟಿಬೇಟಿಯನ್ ಭಾಷೆಯಲ್ಲಿ ನೀಡಿದ ಉತ್ತರಗಳನ್ನು ಹಿಂದಿ ಭಾಷೆಗೆ ಅನುವಾದಿಸಿರುತ್ತಾರೆ. ಅನುವಾದಕರಿಗೆ ಪ್ರಮಾಣ ವಚನ ಬೋಧಿಸಲಾಯಿತು).**

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಆರ್ ಎಸ್ ಹೆಚ್ ವಕೀಲರಿಂದಃ**

ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದೂರನ್ನು ದಾಖಲಿಸಲು ನಾನು ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು ಈ ಮೊದಲು ನಾನು ನೋಡಿರುವುದಿಲ್ಲ ಎಂದರೆ ಈ ಮೊದಲು ನಾನು ನೋಡಿರುತ್ತೇನೆ. ಎಲ್ಲಿ ನೋಡಿರುತ್ತೀರಿ ಎಂದರೆ ಪೊಲೀಸ ಠಾಣೆಯಲ್ಲಿ ನೋಡಿರುತ್ತೇನೆ. 2 ನೇ ಆರೋಪಿಯನ್ನು ಯಾವ ದಿನಾಂಕದಂದು ನೋಡಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ನಾನು 2 ನೇ ಆರೋಪಿಯನ್ನು ನೋಡದೇ ಇದ್ದ ಕಾರಣ ನನಗೆ ದಿನಾಂಕ ನೆನಪಿರುವುದಿಲ್ಲ ಎಂದರೆ ಸರಿಯಲ್ಲ. ಕಳುವಾಗಿರುತ್ತದೆ ಎಂದು ಹೇಳುವ ಸ್ವತ್ತುಗಳು ನನಗೇ ಸಂಬಂಧಿಸಿರುತ್ತವೆ ಎಂದು ಸೂಚಿಸಲು ನನ್ನ ಬಳಿ ದಾಖಲೆಗಳು ಇವೆಯೇ ಎಂದರೆ ಪೊಲೀಸರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಈಗ 3 ಸ್ವತ್ತುಗಳು ನ್ಯಾಯಾಲಯದ ಮುಂದೆ ಇರುವುದಿಲ್ಲ ಎಂದರೆ ಸರಿ. ಯಾವ ದಿನಾಂಕದಂದು ನಾನು ದೂರನ್ನು ದಾಖಲಿಸಿರುತ್ತೇನೆ ಎಂದರೆ 3 ನೇ ತಾರೀಖಿಗೆ ಕಳ್ಳತನವಾಗಿದ್ದು, 4 ನೇ ತಾರೀಖಿಗೆ ದೂರನ್ನು ದಾಖಲಿಸಿದ್ದೆ ಎಂದು ನುಡಿಯುತ್ತಾರೆ. ನಾನು ಪೊಲೀಸ ಠಾಣೆಯಲ್ಲಿ ಒಂದು ಬಾರಿ ಮಾತ್ರ ನನ್ನ ಮರು ಹೇಳಿಕೆಯನ್ನು ನೀಡಿದ್ದೇನೆ. ನಾನು ದಿಃ 04-03-2016 ರಂದು ಮರು ಹೇಳಿಕೆಯನ್ನು ನೀಡಿರುತ್ತೇನೆ. ನನ್ನ ಮರು ಹೇಳಿಕೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ನನಗೆ ನೆನಪಿಲ್ಲ. ನನ್ನ ಮರು ಹೇಳಿಕೆಯನ್ನು ಯಾವುದಕ್ಕೆ ಸಂಬಂಧಿಸಿದಂತೆ ನೀಡಿರುತ್ತೇನೆ ಎಂದರೆ ನಾನು ಮರು ಹೇಳಿಕೆ ನೀಡಿರುವುದಿಲ್ಲ. ದೂರಿನಲ್ಲಿ ಏನು ಬರೆಯಲಾಗಿದೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ, ಮೊಬೈಲ್ ಗಳು ಕಳ್ಳತನವಾದ ಬಗ್ಗೆ ಬರೆಯಲಾಗಿದೆ ಎಂದು ನುಡಿಯುತ್ತಾರೆ. ನನ್ನ ಮರು ಹೇಳಿಕೆಯಲ್ಲಿ ದೂರನ್ನು ದಿಃ 03-04-2016 ರಂದು ನಮೂದಿಸಲಾಗಿದೆ

ಎಂದರೆ ಸರಿ. ಯಾವ ದಿನಾಂಕದಂದು ಕಳ್ಳತನವಾಗಿರುತ್ತದೆ ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ ಎಂದರೆ ಸಾಕ್ಷಿಯು 03-03-2016 ಎಂದು ನುಡಿಯುತ್ತಾರೆ. ನನ್ನ ಮರು ಹೇಳಿಕೆಯಲ್ಲಿ ಕಳ್ಳತನವು ದಿಃ 04-03-2016 ರಂದು ಕಳ್ಳತನವಾಗಿರುತ್ತದೆ ಎಂದು ಹೇಳಿದ್ದರಿಂದ ದೂರಿನಲ್ಲಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸಾಕ್ಷಿಯು ದಿಃ 03-03-2016 ರಂದು ಕಳ್ಳತನವಾಗಿದ್ದು, 4 ನೇ ತಾರೀಖಿನಂದು ದೂರನ್ನು ದಾಖಲು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಕಳ್ಳತನವು ಮಾರ್ಚ ತಿಂಗಳಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. 2 ನೇ ಆರೋಪಿಗೆ ಮತ್ತು ಈ ಗುನ್ನೆಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಂಬಂಧ ಇದೆ, ನಾನು ಅವನನ್ನು ಪೊಲೀಸ ಠಾಣೆಯಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಪಂಚನಾಮೆ ಯಾವ ತಾರೀಖಿನಂದು ಜರುಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ದಿಃ 04-03-2016 ರಂದು ಪೊಲೀಸರು ಸ್ಥಳಕ್ಕೆ ಬಂದು ಮೋಟಾರ ಸೈಕಲನ್ನು ತೆಗೆದುಕೊಂಡು ಹೋಗುವ ಸಮಯಕ್ಕೆ ಪಂಚನಾಮೆ ಜರುಗಿಸಿರುತ್ತಾರೆ ಎಂದು ನುಡಿಯುತ್ತಾರೆ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸ್ಥಳದಲ್ಲಿ ಮೋಟಾರ ಸೈಕಲ್ ಇದ್ದ ಕಾರಣ ಪೊಲೀಸರು ಮೋಟಾರ ಸೈಕಲನ್ನು ತೆಗೆದುಕೊಂಡು ಹೋಗಲು ಬಂದಿದ್ದರು ಮತ್ತು ಆ ಬಗ್ಗೆ ಪಂಚನಾಮೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸಮಯಕ್ಕೆ ಛಾಯಚಿತ್ರ ತೆಗೆದಿರುತ್ತಾರೆ ಎಂದು ಹೇಳಿದ್ದು, ಯಾವ ಕಾರಣಕ್ಕಾಗಿ ಛಾಯಚಿತ್ರ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಸದರಿ ಸ್ಥಳದಿಂದ ಮೋಟಾರ ಸೈಕಲನ್ನು ತೆಗೆದುಕೊಂಡು ಹೋದ ಬಗ್ಗೆ ಸಾಕ್ಷ್ಯಗಾಗಿ ಛಾಯಚಿತ್ರ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಆದ ಕಾರಣ 2 ನೇ ಆರೋಪಿಗೆ ಮತ್ತು ಮುದ್ದೆಮಾಲುಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2 ನೇ ಆರೋಪಿಯನ್ನು ಠಾಣೆಯಲ್ಲಿ ತೋರಿಸಿದ ಕಾರಣ ಅವರಿಗೆ ಸಂಬಂಧ ಇರುತ್ತದೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

**ಓ .ಹೇ.ಕೇ. ಸರಿ ಇದೆ**

**-Sd-**

**ಪ್ರ.ದ.ನ್ಯಾ.ದಂ. ಮುಂಡಗೋಡ.**